ಜವಳಿ ಪಾರ್ಕ್ ಸಲುವಾಗಿ ಭೂಸ್ವಾಧೀನವಾಗಿರುವ ಒಟ್ಟು 252–17 ಎಕರೆ ಜಮೀನಿಗೆ ಪರಿಹಾರ ಪಾವತಿಸುವ ಬಗ್ಗೆ ಜಿಲ್ಲಾಧಿಕಾರಿಗಳು. ಮೈಸೂರು ಜಿಲ್ಲೆ ರವರ ಅಧ್ಯಕ್ಷತೆಯಲ್ಲಿ ದಿನಾಂಕ 18.9.2008 ಹಾಗೂ ದಿನಾಂಕ 22.6.2009ರಂದು ಭೂದರ ನಿರ್ಧರಣಾ ಸಲಹಾ ಸಮಿತಿ ಸಭೆಗಳನ್ನು ನಡೆಸಲಾಗಿದ್ದು ಒಪ್ಪಂದದ ದರದಲ್ಲಿ ಬೆಲೆ ನಿಗದಿಪಡಿಸುವಲ್ಲಿ ಒಮ್ಮತ ಮೂಡದ ಕಾರಣ ಸಭೆಯನ್ನು ಮುಂದೂಡಲಾಗಿದೆ. ಮತ್ತೊಮ್ಮೆ ಸಲಹಾ ಸಮಿತಿ ಸಭೆಯನ್ನು ಕರೆದು ಒಪ್ಪಂದದ ದರದಲ್ಲಿ ಬೆಲೆ ನಿಗದಿಪಡಿಸಿ ಅದರಂತೆ ಭೂಮಾಲೀಕರಿಗೆ ಪರಿಹಾರ ಪಾವತಿಸಲು ಕ್ರಮ ಜರುಗಿಸಲಾಗುವುದು.

**ಕಡತ ಸಂ. ಸಿಐ 08 ಐಎಸಿ 2009.**

**(ಮುರುಗೇಶ ಆರ್.ನಿರಾಣಿ)**
**ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು.**

**ಕರ್ನಾಟಕ ವಿಧಾನ ಸಭೆ**

**198 ಶ್ರೀ ಶಿವಲಿಂಗೇಗೌಡ ಕೆ.ಎಂ.**

**ಮಾನ್ಯ ಸಣ್ಣ ನೀರಾವರಿ ಯೋಜನೆ ಮತ್ತು ಸಾಂಖ್ಯಿಕ ಸಚಿವರು.**

ಅ) ರಾಜ್ಯ ಸರ್ಕಾರ ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ 2008–09ರಲ್ಲಿ ಬಿಡುಗಡೆ ಮಾಡಿದ ಅನುದಾನದ ಮೊತ್ತ ಎಷ್ಟು ಹಾಗೂ ವೆಚ್ಚವಾದ ಅನುದಾನ ಎಷ್ಟು,

ರಾಜ್ಯ ಸರ್ಕಾರ ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ 2008–09ರಲ್ಲಿ ರೂ.610.00 ಲಕ್ಷಗಳನ್ನು ಬಿಡುಗಡೆ ಮಾಡಿದೆ. ಇದರ ಪೈಕಿ ರೂ.413.10 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಆ) 2009–10ರಲ್ಲಿ ನಿಗದಿಪಡಿಸಲಾಗಿರುವ ಅನುದಾನದ ಮೊತ್ತ ಎಷ್ಟು ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದೇ (ಮಾಹಿತಿ ನೀಡುವುದು)?

2009–10ರಲ್ಲಿ ಒಟ್ಟು 1000.00 ಲಕ್ಷ ರೂ.ಗಳನ್ನು ಒದಗಿಸಲಾಗಿದ್ದು ಇದರ ಪೈಕಿ 300.00 ಲಕ್ಷ ರೂ.ಗಳನ್ನು ವಿಶೇಷ ಘಟಕ ಯೋಜನೆಗಾಗಿ ಕ್ರೋಢೀಕರಿಸಿ ಸಮಾಜ ಕಲ್ಯಾಣ ಇಲಾಖೆಗೆ ನೀಡಲಾಗಿದೆ. ಇನ್ನುಳಿದ 700.00 ಲಕ್ಷ ರೂಗಳಿಗೆ ಶಾಸಕರುಗಳು ಶಿಫಾರಸ್ಸು ಮಾಡುವ ಅಭಿವೃದ್ಧಿ ಕಾರ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು.